(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***jitsi app*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 20-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ **LADCS** ನ **Chief Defense counsel** ಆದ ಶ್ರೀ ಹೆಚ್.ಟಿ.ಎಸ್.ಕೆ. ವಕೀಲರಿಂದಃ ಆರೋಪಿ ಪರವಾಗಿಃ

16. ಘಟನಾ ಸಮಯದಲ್ಲಿ ಫ್ರಾಸಾ.2 ರವರು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದರು ಮತ್ತು ಚಾಸಾ.6 ರವರು ಮಂಗಳೂರಿನಲ್ಲಿ ವಾಸವಾಗಿದ್ದರು. ಸದರಿ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ. ಸದರಿ ವಿಚಾರವನ್ನು ದೂರಿನಲ್ಲಿ ಬರೆಸಿದ್ದಿರಾ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಗಾಬರಿ ಮತ್ತು ದುಃಖದಲ್ಲಿದ್ದ ಕಾರಣ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿಗೆ ನಿಪಿ.1 ರಲ್ಲಿರುವ ಸಹಿಯನ್ನು ತೋರಿಸಿ ನೀವು ಸಹಿ ಮಾಡಿರುವ ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಾನು ಹೇಳಿದ್ದನ್ನು ಪೊಲೀಸರು ಬರೆದಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳನ್ನು ನಿಮಗೆ ಓದಿ ಹೇಳಿಲ್ಲ ಎಂದರೆ ಸಾಕ್ಷಿ ಓದಿ ಹೇಳಿದ್ದಾರೆ ಎನ್ನುತ್ತಾರೆ. ದೂರನ್ನು ನೀಡಲು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಿದ್ದೆನು. ನಿಪಿ.1

ದೂರನ್ನು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಬರೆದು ನೀಡಲಾಗಿದೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

17. ಸಾಕ್ಷಿಗೆ ನಿಪಿ.2 ರಲ್ಲಿರುವ ಸಹಿಯನ್ನು ತೋರಿಸಿ ಸದರಿ ಸಹಿಯನ್ನು ನೀವು ಪೊಲೀಸ್ ಠಾಣೆಯಲ್ಲಿ ಮಾಡಿದ್ದೀರಾ ಎಂದರೆ ಸಾಕ್ಷಿ ಠಾಣೆಯಲ್ಲಿಯೂ ಮಾಡಿದ್ದೇನೆ ಮತ್ತು ಪೊಲೀಸರು ಮಹಜರಿಗೆ ಬಂದಾಗ ನಮ್ಮ ಮನೆಯ ಹತ್ತಿರ ಮಾಡಿದ್ದೇನೆ ಎನ್ನುತ್ತಾರೆ. ಠಾಣೆಯಲ್ಲಿ ಒಟ್ಟು ಎಷ್ಟು ಸಹಿಗಳನ್ನು ಮಾಡಿದ್ದಿರಾ ಎಂದರೆ ಸಾಕ್ಷಿ 3-4 ಸಹಿಗಳನ್ನು ಮಾಡಿರಬಹುದು ನನಗೆ ನೆನಪಿಲ್ಲ ಎನ್ನುತ್ತಾರೆ. ಮಹಜರಿಗೆಂದು ಪೊಲೀಸರು ಮನೆಯ ಬಳಿ ಬಂದಾಗ 3 ಸಹಿಗಳನ್ನು ಮಾಡಿದ್ದೇನೆ. ಸದರಿ ದಾಖಲೆಗಳಲ್ಲಿ ನೀವು ಸಹಿ ಮಾಡುವ ಕಾಲಕ್ಕೆ ಯಾವುದೇ ಬರವಣಿಗೆ ಮಾಡಿರಲಿಲ್ಲ ಅವು ಖಾಲಿ ಇದ್ದವು ಎಂದರೆ ಸರಿಯಲ್ಲ. ನೀವು ಸಹಿ ಮಾಡಿರುವ ದಾಖಲೆಗಳನ್ನು ಟೈಪ್ ಮಾಡಲಾಗಿತ್ತೆ ಅಥವಾ ಬರೆಯಲಾಗಿತ್ತೆ ಎಂದರೆ ಸಾಕ್ಷಿ ಎನ್.ಆರ್.ಪುರ ನ್ಯಾಯಾಲಯದಲ್ಲಿ ನಾನು ಹೇಳಿದ್ದನ್ನು ಟೈಪ್ ಮಾಡಿಕೊಂಡರು, ಬಾಳೆಹೊನ್ನೂರು ಪೊಲೀಸ್ ಠಾಣೆ ಮತ್ತು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಹೇಳಿದ್ದನ್ನು ಬರೆದುಕೊಂಡಿದ್ದಾರೆ. ನಿಪಿ.2 ದಾಖಲೆಯಲ್ಲಿರುವ ಸಾಕ್ಷಿಯ ಸಹಿಯನ್ನು ತೋರಿಸಿ ಸದರಿ ಸಹಿಯನ್ನು ಯಾವ ಕಾರಣಕ್ಕೆ ಮಾಡಿದ್ದಿರಾ ಎಂದು ತಿಳಿದಿದೇಯೇ ಎಂದರೆ ಸಾಕ್ಷಿ ನನ್ನ ಗಂಡನ ಕೊಲೆ ಮಾಡಿದ್ದರಿಂದ ಮಹಜರಿಗೆಂದು ಸಹಿ ಮಾಡಿದ್ದೇನೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನಿಮಗೆ ತಿಳಿದಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಹೊತ್ತು ಮೌನವಾಗಿ ನಿಂತು ನಂತರ ಗೊತ್ತಿಲ್ಲ ಎನ್ನುತ್ತಾರೆ.

18. ಮಹಜರ್ ಜರುಗಿಸಲು ಪೊಲೀಸರು ಯಾವ ದಿನಾಂಕದಂದು ಎಷ್ಟು ಗಂಟೆಗೆ ಬಂದಿದ್ದರು ಎಂದರೆ ಸಾಕ್ಷಿ 10 ನೇ ತಾರೀಕು ನನ್ನ ಗಂಡನ ಮೇಲೆ ಹಲ್ಲೆಯಾಯಿತು 11 ನೇ ತಾರೀಕಿನಂದು ಪೊಲೀಸರು ಮಹಜರಿಗೆ ಬಂದಿದ್ದರು ಆಗ ಪೊಲೀಸರು ನಮ್ಮ ಮನೆಯ ಬಳಿ ಬೆಳಿಗ್ಗೆ 8 ಗಂಟೆಯಿಂದ 9.30 ಗಂಟೆಯವರೆಗೆ ಮಹಜರ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಆ ದಿನ ಪೊಲೀಸರು ಮಹಜರಿಗೆ ಬರುವುದಾಗಿ ನಿಮಗೆ ತಿಳಿಸಿದ್ದರೆ ಎಂದರೆ ಸಾಕ್ಷಿ ಹೌದು ಆ ದಿನ ನಮ್ಮ ಸಂಬಂಧಿಕರು ಮತ್ತು ಪಕ್ಕದ ಮನೆಯವರನ್ನು ನನ್ನ ಗಂಡನೊಂದಿಗೆ ಇರಲು ವೆನಲಾಕ್ ಆಸ್ಪತ್ರೆಗೆ ಕಳುಹಿಸಿಕೊಟ್ಟು ನಾನು ನಮ್ಮ ಮನೆಯ ಬಳಿ ಹೋಗಿದ್ದೆನು ಎನ್ನುತ್ತಾರೆ. ಮನೆಯ ಬಳಿ ಬರುವುದಾಗಿ ಪೊಲೀಸರು ನನಗೆ ಫೋನ್ ಮಾಡಿ ತಿಳಿಸಿದ್ದರು.

19. ಪೊಲೀಸರು ಮನೆಯ ಬಳಿ ಬಂದ ಬಳಿಕ ಯಾರನ್ನಾದರು ಕರೆಸಿದ್ದರೆ ಎಂದರೆ ಸಾಕ್ಷಿ ಚಾಸಾ.7 ರೋಷನ್ ಮತ್ತು ಚಾಸಾ.8 ಅರುಣ ವೇಗಸ್ ರವರನ್ನು ಕರೆಸಿದ್ದರು ಎನ್ನುತ್ತಾರೆ. ಅವರಿಬ್ಬರನ್ನು ಪೊಲೀಸರೇ ಕರೆಸಿದ್ದರು. ಅವರು ನಿಮ್ಮ ಅಕ್ಕಪಕ್ಕದ ಮನೆಯವರು ಎಂದರೆ ಸರಿ. ಸ್ಥಳದಲ್ಲಿ ಪೊಲೀಸರು ನಿಪಿ.3 ರಿಂದ ಪಿ.8 ರಂತೆ ಫೋಟೋಗಳನ್ನು ತೆಗೆದುಕೊಂಡು ಠಾಣೆಗೆ ಹೋದ ಬಳಿಕ ನೀವು, ಚಾಸಾ.7 ಮತ್ತು 8 ರವರು ನಿಪಿ.2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಅದಕ್ಕೆ ನಮ್ಮ ಮನೆಯ ಹತ್ತಿರ ಕೃತ್ಯ ನಡೆದ ಸ್ಥಳದಲ್ಲಿ ಸಹಿ ಮಾಡಿದ್ದೇವೆ ಎನ್ನುತ್ತಾರೆ. ನಿಪಿ.3 ರಿಂದ ಪಿ.8 ಫೋಟೋಗಳಿಗೆ ಪೊಲೀಸರು ಹೇಳಿದ್ದರಿಂದ ನಿಂತುಕೊಂಡಿದ್ದಿರಿ ಹೊರತು ಯಾವ ವಿಚಾರಕ್ಕೆ ಅವುಗಳನ್ನು

ತೆಗೆಯಲಾಗಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅಲ್ಲಿ ನನ್ನ ಗಂಡನ ಮೇಲೆ ಹಲ್ಲೆಯಾಗಿದ್ದ ಕಾರಣಕ್ಕೆ ತೆಗೆದಿದ್ದಾರೆ ಎನ್ನುತ್ತಾರೆ.

20. ಹಲ್ಲೆಯಾದ ಕೂಡಲೇ ನಾನು ಪ್ರಾಸಾ.2 ರವರಿಗೆ ಫೋನ್ ಮಾಡಿ ನಡೆದ ವಿಚಾರವನ್ನು ತಿಳಿಸಿದ್ದೇನೆ, ಸ್ವಲ್ಪ ಸಮಯದ ಬಳಿಕ ಚಾಸಾ.6 ರವರಿಗೆ ಫೋನ್ ಮಾಡಿ ತಿಳಿಸಿದ್ದೇನೆ. ಅದೇ ದಿನ ನನ್ನ ಗಂಡ ವೆನಲಾಕ್ ಆಸ್ಪತ್ರೆಯಲ್ಲಿ ಮೃತಪಟ್ಟ ಬಳಿಕ ಪ್ರಾಸಾ.2 ರವರು ಅಲ್ಲಿಗೆ ಬಂದಿದ್ದರು. ನಾನು ನನ್ನ ಮಗ ಪ್ರಾಸಾ.2 ರವರಿಗೆ ಫೋನ್ ಮಾಡಿದಾಗ ಘಟನೆಯ ಬಗ್ಗೆ ಸಂಪೂರ್ಣ ವಿವರವನ್ನು ನೀಡಿದ್ದೆನು, ಆದರೆ ನನ್ನ ಮಗಳಿಗೆ ಲೋ ಬಿಪಿ ಇರುವ ಕಾರಣ ಕೇವಲ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರವನ್ನು ತಿಳಿಸಿದ್ದೆನು.

21. ಘಟನೆಯ ಪೂರ್ವದಲ್ಲಿ ಆರೋಪಿ ಮತ್ತು ನಿಮ್ಮ ಗಂಡ ಅನೋನ್ಯವಾಗಿದ್ದರು ಎಂದರೆ ಸಾಕ್ಷಿ ಒಮ್ಮೊಮ್ಮೆ ಚೆನ್ನಾಗಿರುತ್ತಿದ್ದರು ಒಮ್ಮೊಮ್ಮೆ ಕಚ್ಚಾಡುತ್ತಿದ್ದರು ಎನ್ನುತ್ತಾರೆ. ಮಾರ್ಚ 4 ನೇ ತಾರೀಕಿನಂದು ಆರೋಪಿ ನಮ್ಮ ಮನೆಗೆ ಬಂದಿದ್ದನು. ನಿಮ್ಮ ಗಂಡನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿ ಆ ಬಗ್ಗೆ ಆತ ಶಿವಮೊಗ್ಗ ಜೈಲ್ಲಿನಲ್ಲಿದ್ದರು ಎಂದರೆ ಸಾಕ್ಷಿ ನಾನು ಆತನನ್ನು ಮದುವೆಯಾದ ಬಳಿಕ ಆ ರೀತಿ ಯಾವುದೇ ಕೇಸು ದಾಖಲಾಗಿಲ್ಲ ಹಿಂದೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಗಂಡ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರಿಂದ ಆತ ಶಿವಮೊಗ್ಗ ಜೈಲ್ಲಿನಲ್ಲಿದ್ದ ಸಮಯದಲ್ಲಿ ಆತನಿಗೆ ಆ ಬಗ್ಗೆ ಚಿಕಿತ್ಸೆ ನೀಡಲಾಗಿತ್ತು ಎಂದರೆ ಸಾಕ್ಷಿ ಆ ರೀತಿ ಯಾವುದೇ ಸಮಸ್ಯೆ ಇರಲಿಲ್ಲ ಆತ ಚೆನ್ನಾಗಿದ್ದರು ಎನ್ನುತ್ತಾರೆ.

22. ನಿಮ್ಮ ಗಂಡನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸಾಕ್ಷಿ ಮೊದಲಿಗೆ ಇತ್ತು ಆದರೆ ಹೆಚ್ಚಾಗಿ ಇರಲಿಲ್ಲ, ನಂತರ ಆತನಿಗೆ ಜಾಂಡೀಸ್ ಆಗಿದ್ದರಿಂದ ಆತ ಕುಡಿಯುವುದನ್ನು ನಿಲ್ಲಿಸಿದ್ದರು ಎನ್ನುತ್ತಾರೆ. ಆತ ಅತೀಯಾಗಿ ಮದ್ಯಪಾನ ಮಾಡುತ್ತಿದ್ದರಿಂದಲೇ ಆತನಿಗೆ ಜಾಂಡೀಸ್ ಆಗಿತ್ತು ಎಂದರೆ ಸಾಕ್ಷಿ ಅತೀಯಾಗಿ ಮದ್ಯಪಾನ ಮಾಡುತ್ತಿರಲಿಲ್ಲ ಎನ್ನುತ್ತಾರೆ.

23. ನಿಮ್ಮ ಗಂಡನಿಗೆ ಆರೋಗ್ಯ ಸರಿಯಿಲ್ಲದ ಕಾರಣ ಆತ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಗಂಡನಿಗೆ ಓಡಾಡಲು ಆಗುತ್ತಿರಲಿಲ್ಲ ನಿಶಕ್ತಿ ಇತ್ತು ಎಂದರೆ ಸಾಕ್ಷಿ ಜಾಂಡೀಸ್ ಆಗಿದ್ದರಿಂದ ಸ್ವಲ್ಪ ನಿಶಕ್ತಿ ಇತ್ತು ಆದರೆ ಕೆಲಸ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎನ್ನುತ್ತಾರೆ. ಆ ಕಾರಣಕ್ಕೆ ಆತ ಕೋಲಿನ ಸಹಾಯದಿಂದ ನಡೆದಾಡುತ್ತಿದ್ದರು ಎಂದರೆ ಸಾಕ್ಷಿ ಜಾಂಡೀಸ್ ಆದ ಪ್ರಾರಂಭದಲ್ಲಿ ಕೋಲನ್ನು ಬಳಸುತ್ತಿದ್ದರು ನಂತರ ಆತ ಸ್ವತಂತ್ರವಾಗಿ ನಡೆದಾಡುತ್ತಿದ್ದರು ಎನ್ನುತ್ತಾರೆ. ನಿಮ್ಮ ಗಂಡ ಕೋಲನ್ನು ಹಿಡಿದು ರಸ್ತೆಯಲ್ಲಿ ನಡೆದಾಡುತ್ತಿದ್ದ ಸಮಯದಲ್ಲಿ ಬಸ್ ಮತ್ತು ಬೈಕಿಗೆ ತಾಗಿ ಆತನಿಗೆ ಅಪಘಾತವಾಗಿತ್ತು ಎಂದರೆ ಸರಿಯಲ್ಲ.

24. ನಿಮ್ಮ ಗಂಡನಿಗೆ ಆರೋಗ್ಯ ಸಮಸ್ಯೆಯಿದ್ದ ಸಮಯದಲ್ಲಿ ನೀವು ಆತನನ್ನು ಮನೆಯಲ್ಲೇ ಇರಿಸುತ್ತಿದ್ದು ಆಗ ಆತ ಮನೆಯ ಮುಂದೆ ರಸ್ತೆಯಲ್ಲಿ ಓಡಾಡುವ ವಾಹನಗಳನ್ನು ಅಡ್ಡಗಟ್ಟಿ ಹಣವನ್ನು ಕೇಳಿ ಪಡೆಯುತ್ತಿದ್ದನು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ